# ವಿಶ್ವವಿದ್ಯಾಲಯಕ್ಕೆ ದೊರೆತ ಪುರಸ್ಕಾರ/ಪ್ರಶಸ್ತಿಗಳು/ಮನ್ನಣೆಯ ವಿವರ

| | |
|---|---|
| ಮುಂಬೈನ "ದಿ ತಾಜ್ ಲ್ಯಾಂಡ್ ಎಂಡ್ಸ್." ಹೋಟೆಲ್‌ನಲ್ಲಿ ದಿನಾಂಕ 12–2–2020ರಂದು **"ಕೃಷಿ ಅವಿಷ್ಕಾರ್"** ಕುರಿತು ಜರುಗಿದ ಸಮ್ಮೇಳನದಲ್ಲಿ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ ರಾಯಚೂರು **"ಅತ್ಯುತ್ತಮ ಕೃಷಿ ಸಂಸ್ಥೆ"** ಪ್ರಶಸ್ತಿಗೆ ಭಾಜನವಾಗಿರುತ್ತದೆ. ರಾಷ್ಟ್ರದ ಪ್ರತಿಷ್ಠಿತ ಸಂಘ ಸಂಸ್ಥೆಗಳನ್ನೊಳಗೊಂಡು ಸಾಂಸ್ಥಿಕ ಸಾಮಾಜಿಕ ಜವಾಬ್ದಾರಿ ಕುರಿತು ಕೆಲಸ ಮಾಡುತ್ತಿರುವ ಸಂಸ್ಥೆಗಳ ಒಕ್ಕೂಟವು ಕಾರ್ಯಕ್ರಮವನ್ನು ಆಯೋಜಿಸಿತ್ತು. ಈ ಕಾರ್ಯಕ್ರಮದಲ್ಲಿ 200ಕ್ಕೂ ಹೆಚ್ಚು ಕಾರ್ಪೋರೇಟ್ ಸಂಸ್ಥೆಗಳು, ರಾಷ್ಟ್ರದ ಕೃಷಿ ವಿಜ್ಞಾನಗಳ ವಿಶ್ವವಿದ್ಯಾನಿಲಯಗಳು, ಕೃಷಿ ಸಂಬಂಧಿತ ಸರ್ಕಾರೇತರ ಸಂಸ್ಥೆ (NGO)ಗಳು ಮತ್ತು ಪ್ರಗತಿಪರ ರೈತರು ಭಾಗವಹಿಸಿದ್ದರು. ಕೃವಿವಿ ಜೊತೆಗೆ ರಾಷ್ಟ್ರದ ಇನ್ನು 6 ಕೃಷಿ ಸಂಸ್ಥೆಗಳು, ಈ ಪ್ರಶಸ್ತಿಗೆ ಭಾಜನವಾಗಿರುತ್ತವೆ. |  |
| ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ಮತ್ತು ಉನ್ನತ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ ಇವರ ಶಿಫಾರಸ್ಸಿನಂತೆ ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯಕ್ಕೆ 2017–18ನೇ ಸಾಲಿನಲ್ಲಿ **'Four Star Institution'** **ಮೌಲ್ಯ ದೊರೆತಿದೆ.** |  |
| ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯ, ರಾಯಚೂರಿಗೆ ಅಂತಾರಾಷ್ಟ್ರೀಯ ಮಕ್ಕೆಜೋಳ ಮತ್ತು ಗೋಧಿ ಅಭಿವೃದ್ಧಿ ಕೇಂದ್ರದಿಂದ ದಿನಾಂಕ 12–03–2020ರಂದು ಹೈದರಾಬಾದ್‌ನಲ್ಲಿ ನಡೆದ ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ **"ಪ್ರಶಂಸನಾ ಪ್ರಮಾಣಪತ್ರ"** ವನ್ನು ನೀಡಲಾಗಿದೆ. |  |

| | |
|---|---|
| ಭಾರತ ಸರ್ಕಾರವು **‘ಗುಲ್ಬರ್ಗಾ ತೊಗರಿ ಬೇಳೆ’ಗೆ ಭೌಗೋಳಿಕ ಸೂಚಕ (GI Tag) ನೋಂದಾವಣೆ** ನೀಡಿದ್ದು ಈ ಭಾಗದ ತೊಗರಿ ಬೆಳೆಗಾರರ ಶ್ರಮಕ್ಕೆ ಸಿಕ್ಕ ಮನ್ನಣೆಯಾಗಿದೆ. |  |